# ರೋಹಿತ್–ಕೊಹ್ಲಿ ಸ್ನೇಹದ ಓಟ

ರೋಹಿತ್–ಕೊಹ್ಲಿ ಬ್ಯಾಟಿಂಗ್, ನಾಯಕತ್ವ ಒಂದಕ್ಕೊಂದು ತಾಳೆಯಾಗುವುದೇ ಇಲ್ಲ. ಇಬ್ಬರದೂ ವಿಭಿನ್ನ ಶೈಲಿ. ಸ್ವಭಾವದಲ್ಲೂ ವೈರುಧ್ಯ. ಆದರೆ ಇಬ್ಬರೂ ಜೊತೆಯಾಗಿ ತಂಡದ ಗೆಲುವಿಗಾಗಿ ತುಡಿದ ರೀತಿ ಯುವ ಆಟಗಾರರಿಗೆ ಮಾದರಿಯಾಗಿರುವಂಥದ್ದು..

■ ಗಿರೀಶ ದೊಡ್ಡಮನಿ






ಸಿಡ್ನಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ರೋಹಿತ್ ಶರ್ಮಾ ಈಚೆಗೆ ಶತಕ ಬಾರಿಸಿದರು. ಆದರೆ ಅವರಿಗಿಂತಲೂ ಹೆಚ್ಚು ಸಂಭ್ರಮಿಸಿದ್ದು ಮಾತ್ರ ವಿರಾಟ್ ಕೊಹ್ಲಿ!

ಆಸ್ಟ್ರೇಲಿಯಾ ಎದುರಿನ ಆ ಏಕದಿನ ಪಂದ್ಯದಲ್ಲಿ ರೋಹಿತ್ ಮತ್ತು ವಿರಾಟ್ ಕೊಹ್ಲಿ ಅವರ ಜೊತೆಯಾಟದಲ್ಲಿ ಗಮನಸೆಳೆದ ಅಂಶ ಇದು. ಯಾವುದೇ ಪಂದ್ಯದಲ್ಲಿ ಯಾರೇ ವಿಕೆಟ್ ಪಡೆಯಲಿ ಅಥವಾ ಶತಕ, ಅರ್ಧಶತಕ ಬಾರಿಸಿದಾಗ ಮನಬಿಚ್ಚಿ ಸಂಭ್ರಮಿಸುವುದು ವಿರಾಟ್ ಜಾಯಮಾನ. ಆದರೆ ಒಂದು ಕಾಲದಲ್ಲಿ ತಂಡದೊಳಗೇ ತನ್ನ ನಾಯಕತ್ವ ಮತ್ತು ಸ್ಥಾನಕ್ಕೆ ಹೆಚ್ಚು ಪೈಪೋಟಿಯೊಡ್ಡಿದ್ದ ಸಹ ಆಟಗಾರನ ಸಾಧನೆಗೆ ದೊಡ್ಡದಾಗಿ ಸಂಭ್ರಮಿಸುವುದು ವಿರಾಟ್ ಕ್ರೀಡಾ ಮನೋಭಾವಕ್ಕೆ ಉದಾಹರಣೆ. ಇತ್ತೀಚೆಗೆ ಅವರಿಬ್ಬರ ನಡುವೆ ಬೆಳೆದಿರುವ ಗಾಢಸ್ನೇಹದ ಪ್ರತಿಫಲನವೂ ಇದಾಗಿರಬಹುದು.

ಪ್ರಸಕ್ತ ಕಾಲಘಟ್ಟದ ಇಬ್ಬರು ದಿಗ್ಗಜರು ಸಾಧನೆಗಳ ಶಿಖರ ಏರಿದಂತೆ ಹಿಂದಿನ ಮುನಿಸು, ವೈರತ್ವ ಮತ್ತು ಅಸೂಯೆಗಳನ್ನು ಬದಿಗಿಟ್ಟು ಒಬ್ಬರಿಗೊಬ್ಬರು ಪೂರಕವಾಗಿ ಬೆಳೆಯುವ ರೂಪಕವನ್ನು ವಿರಾಟ್ ಮತ್ತು ರೋಹಿತ್ ಸ್ನೇಹದಲ್ಲಿ ಕಾಣಬಹುದು.

ನಾಲ್ಕು ವರ್ಷಗಳ ಹಿಂದೆ ವಿರಾಟ್ ಕೊಹ್ಲಿ ಅವರಿಂದ ಏಕದಿನ ಕ್ರಿಕೆಟ್ ತಂಡದ ನಾಯಕತ್ವವನ್ನು ಕಿತ್ತು ರೋಹಿತ್‌ಗೆ ವಹಿಸಲಾಗಿತ್ತು. ಆ ಸಂದರ್ಭದಲ್ಲಿ ಇಬ್ಬರ ಅಭಿಮಾನಿಗಳ ನಡುವೆ ಸಾಮಾಜಿಕ ಜಾಲತಾಣಗಳಲ್ಲಿ ವಾಗ್ಯುದ್ಧಗಳು ನಡೆದಿದ್ದವು. ಒಂದೇ ಡ್ರೆಸಿಂಗ್ ರೂಮ್ ಹಂಚಿಕೊಂಡಿದ್ದ ಇಬ್ಬರೂ ಆಟಗಾರರು ತಮ್ಮ ವೈಮನಸ್ಸನ್ನು ಬೆಳೆಯಗೊಡಲಿಲ್ಲ. ಕೊಹ್ಲಿ ಭವಿಷ್ಯವನ್ನು ರೋಹಿತ್ ಮುಗಿಸಿಬಿಡುತ್ತಾರೆ ಎಂಬ ಆತಂಕದ ನುಡಿಗಳು ಕೇಳಿಬಂದಿದ್ದವು. ಕೆಲವು ಪತ್ರಕರ್ತರು ಸುದ್ದಿಗೋಷ್ಠಿಯಲ್ಲಿ ಪರೋಕ್ಷವಾಗಿ ರೋಹಿತ್ ಅವರಿಗೆ ಈ ಪ್ರಶ್ನೆ ಕೇಳಿಯೇಬಿಟ್ಟಿದ್ದರು.

‘ಏನ್ ಮಾತಾಡುತ್ತೀರಿ ನೀವು. ವಿರಾಟ್ ಎಂತಹ ಆಟಗಾರ ಗೊತ್ತೆ. ಅವರ ರನ್ ಸರಾಸರಿ, ಶೈಲಿ, ಫಿಟ್‌ನೆಸ್ ಬಗ್ಗೆ ನೋಡಿ. ಅವರ ಅನುಭವ ಅಮೂಲ್ಯವಾದದ್ದು. ಕೆಲವು ಪಂದ್ಯಗಳಲ್ಲಿ ವಿಫಲರಾದ ಮಾತ್ರಕ್ಕೆ ಬಿಡಲಾಗದು’ ಎಂದು ನಾಯಕನಾಗಿ ರೋಹಿತ್ ಪ್ರತ್ಯುತ್ತರ ಕೊಟ್ಟಿದ್ದರು. ಅದೇ ರೀತಿ ನಡೆದುಕೊಂಡರು ಕೂಡ. ಇವರಿಬ್ಬರ ಸಮನ್ವಯ ಸಾಧನೆಗೆ ಆಗ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರ ಮಾರ್ಗದರ್ಶನವೂ ಕಾರಣವಾಗಿತ್ತು ಎಂಬುದು ಗುಟ್ಟೇನಲ್ಲ.

ಇವರಿಬ್ಬರ ಬ್ಯಾಟಿಂಗ್, ನಾಯಕತ್ವ ಒಂದಕ್ಕೊಂದು ತಾಳೆಯಾಗುವುದೇ ಇಲ್ಲ. ಇಬ್ಬರದೂ ವಿಭಿನ್ನ ಶೈಲಿ. ರೋಹಿತ್ ಅವರದ್ದು ಹೊಡಿ, ಬಡಿ ಶೈಲಿ. ಆದರೆ ವಿರಾಟ್ ಅವರದ್ದು ಆಕ್ರಮಣಕಾರಿ ಶೈಲಿಯ ಜೊತೆಗೆ ಕಲಾತ್ಮಕತೆಯೂ ಮೇಳೈಸುತ್ತದೆ. ಸ್ವಭಾವದಲ್ಲಿ ರೋಹಿತ್ ಶಾಂತಚಿತ್ತ ಆದರೆ ವಾಚಾಳಿ. ವಿರಾಟ್ ಕೆಲವೊಮ್ಮೆ ಮುಂಗೋಪಿ, ಧಾಡಸಿ ವ್ಯಕ್ತಿತ್ವದವರು. ಆದರೆ ವಯಸ್ಸು ಮತ್ತು ಅನುಭವ ಮಾಗಿದಂತೆ ಇಬ್ಬರೂ ಜೊತೆಯಾಗಿ ತಂಡದ ಗೆಲುವಿಗಾಗಿ ತುಡಿದರು.